# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 496 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಎಳನೀರು ಪ್ರದೇಶಕ್ಕೆ ಉಜಿರೆ ಉಪ ವಿಭಾಗ ಸೋಮಂತಡ್ಕ ಶಾಖಾ ಕಛೇರಿಯಿಂದ ವಿದ್ಯುತ್ ಸಂಪರ್ಕ ನೀಡಲಾಗಿದ್ದು, ಸದರಿ ಎಳನೀರು ಪ್ರದೇಶವು ಚಿಕ್ಕಮಗಳೂರು ಜಿಲ್ಲೆಯ ಕಳಸ ವಿದ್ಯುತ್ ಉಪ ವಿಭಾಗ ಸಂಸ್ಥೆಗೆ ತೀರ ಹತ್ತಿರವಿರುವ ಕಾರಣ ಎಳನೀರು ಪ್ರದೇಶದ ವಿದ್ಯುತ್ ಸಂಪರ್ಕವನ್ನು ಕಳಸ ವ್ಯಾಪ್ತಿಗೆ ಸೇರಿಸುವಂತೆ ಬೆಳ್ತಂಗಡಿ ತಾಲ್ಲೂಕು ಕೃಷಿ ವಿದ್ಯುತ್ ಬಳಕೆದಾರರ ವೇದಿಕೆಯು ಈಗಾಗಲೇ ಮೆಸ್ಕಾಂಗೆ ಮನವಿ ಸಲ್ಲಿಸಿದ್ದು, ಯಾವುದೇ ಕಾರ್ಯ ಪ್ರಗತಿಯಾಗಿರುವುದಿಲ್ಲ ವಾದ್ದರಿಂದ, ಈ ಕುರಿತಂತೆ ಸರ್ಕಾರವು ಸೂಕ್ತ ನಿರ್ಧಾರ ಕೈಗೊಳ್ಳುವುದೆ; (ವಿವರ ಒದಗಿಸುವುದು) | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮಲವಂತಿಗೆ ಗ್ರಾಮದ ಎಳನೀರು ಪ್ರದೇಶದ ಲೈನಿನ ನಿರ್ವಹಣೆ ಹಾಗೂ ಮಾಪಕ ಓದಿ ಬಿಲ್ ನೀಡುವುದು ಇತ್ಯಾದಿ ಎಲ್ಲಾ ಚಟುವಟಿಕೆಗಳನ್ನು ಉಜಿರೆ ಉಪವಿಭಾಗ ವ್ಯಾಪ್ತಿಯ ಸೋಮಂತಡ್ಕ ಶಾಖೆಯಿಂದ ನಿರ್ವಹಿಸಲಾಗುತ್ತಿದೆ.<br><br>ಎಳನೀರು ಪ್ರದೇಶಕ್ಕೆ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯ ಕಳಸ ಉಪವಿಭಾಗದ ಕಳಸ-1 ಶಾಖಾ ವ್ಯಾಪ್ತಿಯ ಸಂಸೆ ಫೀಡರ್ ಮೂಲಕ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ.<br><br>ದಿನಾಂಕ 17.09.2022 ರಂದು ಬೆಳ್ತಂಗಡಿ ತಾಲ್ಲೂಕು ವಿದ್ಯುತ್ ಬಳಕೆದಾರ ಕೃಷಿಕರ ವೇದಿಕೆಯ ಪ್ರತಿನಿಧಿಗಳು ಎಳನೀರು ಪ್ರದೇಶದ ಪರಿವರ್ತಕಗಳನ್ನು ಕಳಸ ವ್ಯಾಪ್ತಿಗೆ ವರ್ಗಾಯಿಸಲು ಅಥವಾ ಹೆಚ್ಚುವರಿ ಪವರ್‌ಮೆನ್ ನೇಮಿಸಲು ಕೋರಿರುತ್ತಾರೆ. ಸೋಮಂತಡ್ಕ ಶಾಖೆಗೆ 4 ಜನ ಹೆಚ್ಚುವರಿ ಪವರ್‌ಮೆನ್‌ಗಳನ್ನು 2022-23 ನೇ ಸಾಲಿನಲ್ಲಿ ನೇಮಕ ಮಾಡಲಾಗಿದ್ದು, ಎಳನೀರು ಪ್ರದೇಶಕ್ಕೆ ಪವರ್ ಮ್ಯಾನ್‌ನ್ನು ನಿಯೋಜಿಸಲಾಗಿರುತ್ತದೆ.<br><br>ಎಳನೀರು ಪ್ರದೇಶವು ಸೋಮಂತಡ್ಕ ಶಾಖಾ ಕಛೇರಿಯಿಂದ 30 ಕಿ.ಮೀ ದೂರ ಇದ್ದರೂ ಮೇಲಿನ ಪ್ರದೇಶಗಳು ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಅಂಚಿನಲ್ಲಿದ್ದು, ಹಾದು ಹೋಗಲು ರಸ್ತೆ ವ್ಯವಸ್ಥೆಯಿರುವುದಿಲ್ಲ ಎಳನೀರು ಪ್ರದೇಶಕ್ಕೆ ತಲುಪಬೇಕಾದರೆ ಸುಮಾರು 110ಕಿ.ಮೀ ಪ್ರಯಾಣ ಮಾಡಬೇಕಾಗಿರುತ್ತದೆ. ರಸ್ತೆ ಮಾರ್ಗದ ಮೂಲಕ ಕಳಸ ಉಪವಿಭಾಗದೊಂದಿಗೆ ಎಳನೀರು ಪ್ರದೇಶಕ್ಕೆ ಉತ್ತಮ ಸಂಪರ್ಕವಿರುತ್ತದೆ. |
| ಆ) | ಈ ಮನವಿಯನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಪರಿಗಣಿಸಿ ಸೂಕ್ತ ಕ್ರಮ ವಹಿಸಲಾಗುವುದು? (ವಿವರ ಒದಗಿಸುವುದು) | |

...2

| | | |
|---|---|---|
| | | ಗ್ರಾಹಕರಿಗೆ ಇನ್ನಷ್ಟು ಹೆಚ್ಚಿನ ಗುಣಮಟ್ಟದ ಸೇವೆಯನ್ನು ನೀಡುವಲ್ಲಿ ಮೆಸ್ಕಾಂ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ಉಜಿರೆ ಉಪವಿಭಾಗದಿಂದ ಚಿಕ್ಕಮಗಳೂರು ಜಿಲ್ಲಾವ್ಯಾಪ್ತಿಯ ಕಳಸ ಉಪವಿಭಾಗಕ್ಕೆ ಒಟ್ಟು 6 ಪರಿವರ್ತಕಗಳು ಮತ್ತು 139 ಸ್ಥಾವರಗಳನ್ನು ವರ್ಗಾಯಿಸಲು ಕ್ರಮ ಕೈಗೊಳ್ಳಲಾಗಿದೆ.<br><br>ಮುಂದುವರೆದು ಎಳನೀರು ಪ್ರದೇಶದ ಎಲ್ಲಾ ವಿದ್ಯುತ್ ಸಂಪರ್ಕಗಳನ್ನು ಕಳಸ ವ್ಯಾಪ್ತಿಗೆ ಸೇರಿಸಲು ದಿನಾಂಕ:04.07.2023 ರಂದು ಆದೇಶ ಹೊರಡಿಸಲಾಗಿದೆ. |

ಸಂಖ್ಯೆ: ಎನರ್ಜಿ 146 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು